## ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ-577 501

ಇ-ಮೇಲ್ ವಿಳಾಸ: deo.chitradurga@gmail.com ದೂರವಾಣಿ ಸಂ: 08194-224027

ಸಂಖ್ಯೆ/ಎಲ್.ಎ.ಕ್ಯೂ/ಹೆಚ್.ವೈ.ಆರ್/ಸಿಆರ್/29/2018-19 ದಿನಾಂಕ:01-07-2019

ನಮೂನೆ-01

ಭಾಗ-ಎ

**ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆ**

(ನಿಯಮ 3(6)ನ್ನು ನೋಡಿ)

ಹಿರಿಯೂರು ಪಟ್ಟಣದ ಹತ್ತಿರ ರಾಜ್ಯ ಹೆದ್ದಾರಿ ಶ್ರೀರಂಗಪಟ್ಟಣ-ಜೇವರ್ಗಿ ರಸ್ತೆ (ರಾಜ್ಯ ಹೆದ್ದಾರಿ-19) ಮತ್ತು ರಾಷ್ಟ್ರೀಯ ಹೆದ್ದಾರಿ-4 ನ್ನು ಜೋಡಿಸುವ ಸಂಪರ್ಕ ರಸ್ತೆ ನಿರ್ಮಾಣ ಉದ್ದೇಶಕ್ಕೆ, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಚಿತ್ರದುರ್ಗ ವಿಭಾಗ, ಚಿತ್ರದುರ್ಗ ರವರಿಗೆ ಈ ಕೆಳಗಿನ ಕೋಷ್ಟಕದಲ್ಲಿನ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಕಸಬಾ ಹೋಬಳಿ **ಹುಲುಗಲಕುಂಟೆ ಗ್ರಾಮದ** ರಿ.ಸ.ನಂ.1/1 ರಲ್ಲಿ 0-06 ಗುಂಟೆ, 9/ಪಿ1 ಮತ್ತು 9/ಪಿ2 ರಲ್ಲಿ 0-02 ಗುಂಟೆ, 11/1 ರಲ್ಲಿ 0-05 ಗುಂಟೆ, 12/1 ರಲ್ಲಿ 0-02 ಗುಂಟೆ ಮತ್ತು 13 ರಲ್ಲಿ 0-04 ಗುಂಟೆ ಜುಮ್ಲಾ 0-19 ಗುಂಟೆ, **ಸೋಮೇರಹಳ್ಳಿ ಗ್ರಾಮದ** ರಿ.ಸ.ನಂ.67/2 ರಲ್ಲಿ 0-09 ಗುಂಟೆ, 48/1ಪಿ1 ರಲ್ಲಿ 0-08 ಗುಂಟೆ, 50 ರಲ್ಲಿ 0-20 ಗುಂಟೆ, 56/ಪಿ1 ರಲ್ಲಿ 0-37 ಗುಂಟೆ, 77+77 ರಲ್ಲಿ 0-09 ಗುಂಟೆ, 80/1 ರಲ್ಲಿ 0-07 ಗುಂಟೆ, 80/3 ರಲ್ಲಿ 0-05 ಗುಂಟೆ, 92/1 ರಲ್ಲಿ 0-07 ಗುಂಟೆ, 93/1 ರಲ್ಲಿ 0-03 ಗುಂಟೆ, 93/3 ರಲ್ಲಿ 0-03 ಗುಂಟೆ, 207 ರಲ್ಲಿ 1-08 ಎಕರೆ, 218 ರಲ್ಲಿ 0-30 ಗುಂಟೆ, 219 ರಲ್ಲಿ 0-24 ಗುಂಟೆ, 225 ರಲ್ಲಿ 0-33 ಗುಂಟೆ, 303/1 ರಲ್ಲಿ 0-03 ಗುಂಟೆ ಜುಮ್ಲಾ 6-06 ಎಕರೆ, **ಲಕ್ಕನಾಳ್ ಗ್ರಾಮದ** ರಿ.ಸ.ನಂ.2/2ಎ ರಲ್ಲಿ 0-19, 7 ರಲ್ಲಿ 1-00 ಎಕರೆ, 26 ರಲ್ಲಿ 1-25 ಎಕರೆ, 27/1 ರಲ್ಲಿ 0-12, 36/1 ರಲ್ಲಿ 0-17 ಗುಂಟೆ, 37/5ಪಿ1 ಹಾಗೂ 37/5ಪಿ2 ರಲ್ಲಿ 0-15 ಗುಂಟೆ ಮತ್ತು 37/6 ರಲ್ಲಿ 0-12 ಗುಂಟೆ ಜುಮ್ಲಾ 4-20 ಮತ್ತು ಜೆ.ಜಿ.ಹಳ್ಳಿ ಹೋಬಳಿ ಆದಿವಾಲ ಗ್ರಾಮದ ರಿ.ಸ.ನಂ.13 ರಲ್ಲಿ 1-02 ಎಕರೆ, 109 ರಲ್ಲಿ 1-16 ಎಕರೆ, 119/ಪಿ1 ರಲ್ಲಿ 1-13 ಎಕರೆ, 119/ಪಿ3 ರಲ್ಲಿ 0-05 ಗುಂಟೆ, 273/ಪಿ1 ರಲ್ಲಿ 0-05 ಗುಂಟೆ, 274 ರಲ್ಲಿ 0-07 ಗುಂಟೆ, 78 ರಲ್ಲಿ 2-04 ಎಕರೆ ಮತ್ತು 155/2 ರಲ್ಲಿ 0-21 ಗುಂಟೆ ಜುಮ್ಲಾ 6-33 ಎಕರೆ ಒಟ್ಟು ನಾಲ್ಕು ಗ್ರಾಮಗಳಲ್ಲಿ ಜುಮ್ಲ ವಿಸ್ತೀರ್ಣ 17-38 ಎಕರೆ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹಿರಿಯೂರು ಪಟ್ಟಣದ ಹತ್ತಿರ ರಾಜ್ಯ ಹೆದ್ದಾರಿ ಶ್ರೀರಂಗಪಟ್ಟಣ-ಜೇವರ್ಗಿ ರಸ್ತೆ (ರಾಜ್ಯ ಹೆದ್ದಾರಿ-19) ಮತ್ತು ರಾಷ್ಟ್ರೀಯ ಹೆದ್ದಾರಿ-4 ನ್ನು ಜೋಡಿಸುವ ಸಂಪರ್ಕ ರಸ್ತೆ ನಿರ್ಮಾಣ ಉದ್ದೇಶಕ್ಕೆ, ಅತ್ಯಗತ್ಯವಾಗಿ ಬೇಕಾಗಿರುವುದೆಂದು ಜಿಲ್ಲಾಧಿಕಾರಿ ಚಿತ್ರದುರ್ಗ ರವರು ಭಾವಿಸಿರುವುದರಿಂದ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು-2015" ರ ನಿಯಮ 3(6) ರಂತೆ ಈ ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

.....2

:ಭೂಸ್ವಾಧೀನವಾಗುವ ಜಮೀನಿನ ವಿವರಗಳು:

| ಕ್ರ ಸಂ | ತಾಲ್ಲೂಕು | ಹೋಬಳಿ | ಗ್ರಾಮ ಪಂಚಾಯಿತಿ | ಗ್ರಾಮಗಳ ಹೆಸರು | ಭೂ ಸ್ವಾಧೀನದ ಪ್ರಸ್ತಾವನೆಯ ಒಟ್ಟು ವಿಸ್ತೀರ್ಣ ಎ-ಗು |
|---|---|---|---|---|---|
| 1 | ಹಿರಿಯೂರು | ಕಸಬ | ಉಡುವಳ್ಳಿ | ಹುಲುಗಲಕುಂಟೆ | 0-19 ಗುಂಟೆ. |
| 2 | ಹಿರಿಯೂರು | ಕಸಬ | ಉಡುವಳ್ಳಿ | ಸೋಮೇರಹಳ್ಳಿ | 6-06 ಎಕರೆ |
| 3 | ಹಿರಿಯೂರು | ಕಸಬ | ಉಡುವಳಿ | ಲಕ್ಕನಾಳ್ | 4-20 ಎಕರೆ |
| 4 | ಹಿರಿಯೂರು | ಜೆ.ಜಿ.ಹಳ್ಳಿ | ಆದಿವಾಲ | ಆದಿವಾಲ | 6-33 ಎಕರೆ |

"ಭೂ ಸ್ವಾಧಿನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013"ರ ಕಲಂ 4 ರಿಂದ 9 ಹಾಗೂ "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು-2015"ರ ನಿಯಮ 3 ರಿಂದ 15 ರಂತೆ ಭೂ ಸ್ವಾಧೀನವಾಗುವ ಜಮೀನುಗಳು ಹಾಗೂ ಈ ಪರಿಣಾಮ ನಿರ್ಧರಣೆ ಮಾಡಲು **ಲೀಡ್ (ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ** ರವರನ್ನು ನಿಯೋಜಿಸಲಾಗಿದೆ.

ಸದರಿಯವರು ತಮ್ಮ ತಂಡದೊಂದಿಗೆ ಈ ಮೇಲ್ಕಾಣಿಸಿದ ಗ್ರಾಮಗಳಿಗೆ ದಿನಾಂಕ:26-07-2019 ರಿಂದ ದಿನಾಂಕ:31-07-2019 ರವರಿಗೆ (ತಾತ್ಕಾಲಿಕ ವೇಳಾಪಟ್ಟಿ) ಭೇಟಿ ನೀಡಿ ವಿವರಗಳನ್ನು ಕಲೆ ಹಾಕಿ ಅಧ್ಯಯನ ನಡೆಸಲಿದ್ದಾರೆ. ಈ ಅಧ್ಯಯನದ ಭಾಗವಾಗಿ ಸಂಬಂಧಿಸಿದ ಗ್ರಾಮಗಳ ಜಮೀನುಗಳ ಭೂ ಮಾಲೀಕರು, ರೈತರು, ಗ್ರಾಮಸ್ಥರು ಮತ್ತು ಗ್ರಾಮದ ಮುಖಂಡರ ಸಮ್ಮುಖದಲ್ಲಿ ಗ್ರಾಮ ಸಭೆಗಳು, ರೈತರೊಂದಿಗೆ ಮುಖಾಮುಖಿ ಸಂವಾದ ನಡೆಸಿ ಅಭಿಪ್ರಾಯ ಸಂಗ್ರಹಿಸಲಿದ್ದಾರೆ.

ಸದರಿ ಭೂ ಸ್ವಾಧೀನದ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು/ಅಭಿಪ್ರಾಯಗಳು ಇದ್ದಲ್ಲಿ ಗ್ರಾಮ ಸಭೆಯ ದಿನದಂದು ಆದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ **ಲೀಡ್ (ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ** ರವರಿಗೆ ನೀಡುವುದು. ಈ ಸಮಯದ ನಂತರ ಬಂದ ಆಕ್ಷೇಪಣೆಗಳು ಹಾಗೂ ಈ ಮೊದಲೇ ಸಲ್ಲಿಸಲಾದ ಆಕ್ಷೇಪಣೆಗಳು ಸಮಂಜಸವಾಗಿಲ್ಲದಿದ್ದಲ್ಲಿ, ಆಧಾರ ರಹಿತವಾಗಿರದಿದ್ದಲ್ಲಿ ಯಾವುದೇ ಚರ್ಚೆ ಇಲ್ಲದೆ ತಿರಸ್ಕರಿಸಲಾಗುವುದು ಮತ್ತು ಯಾವುದೇ ರೀತಿಯಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದ ಜಮೀನುಗಳ ವಿವರಗಳನ್ನು ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳು, ಇಕ್ಕನೂರು ಕೆರೆ ಹಿನ್ನಿರಿಗೆ ಮುಳುಗಡೆಯಾ ಉದ್ದೇಶಕ್ಕೆ, ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ರವರ ಕಛೇರಿಯ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು. ಇಲ್ಲವಾದಲ್ಲಿ ಗ್ರಾಮ ಸಭೆಯ ದಿನದಂದು ಗ್ರಾಮ ಸಭೆಯಲ್ಲಿ ಪರಿಶೀಲಿಸಬಹುದು.

ಈ ಮೇಲ್ಕಂಡ ಸಾಮಾಜಿಕ ಪರಿಣಾಮ ನಿರ್ಧರಣೆಯ ಸರ್ಕಾರವು ನೀಡಿದ ನಿರ್ದೇಶನ, ಸುತ್ತೋಲೆ ಹಾಗೂ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013" ರ ಅಧ್ಯಾಯ-2 ಕಲಂ.4 ರಿಂದ 9 ಹಾಗೂ "ಭೂಸ್ವಾಧಿನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು-2015" ರ ಅಧ್ಯಾಯ 2 ರ ನಿಯಮ 3 ರಿಂದ 15 ರಂತೆ ನಡೆಯುತ್ತದೆ.

ಈ ಅಧ್ಯಯನದ ಮೇಲೆ ಯಾವುದೇ ವ್ಯಕ್ತಿ ಯಾವುದೇ ರೀತಿಯ ಪ್ರಭಾವ ಬೀರುವುದಾಗಲಿ, ಪ್ರಲೋಬನೆ ಉಂಟುಮಾಡುವುದಾಗಲಿ ಮಾಡುವಂತಿಲ್ಲ, ಯಾವುದೇ ರೀತಿಯ ಪ್ರಭಾವ ಬೀರಿದರೆ, ಪ್ರಲೋಬನೆ ಉಂಟು ಮಾಡಿದರೆ ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು.

. . . .3

ಗ್ರಾಮ ಸಭೆಗಳು, ಭೂ ಮಾಲೀಕರೊಂದಿಗಿನ ಸಮಾಲೋಚನೆಗಳ ನಂತರ ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು. ನಂತರ ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ಸಂಗ್ರಹಿಸಲಾಗುವುದು. ನಂತರ ವಿಶೇಷ ತಜ್ಞರ ತಂಡಕ್ಕೆ ಕಳುಹಿಸಿ, ಅವರಿಂದ ಯಾವುದಾದರೂ ಶಿಫಾರಸ್ಸುಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಿ ಅಂತಿಮವಾಗಿ ಎಲ್ಲಾ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ ಸಾಮಾಜಿಕ ಪರಿಣಾಮ ನಿರ್ಧರಣೆ (ಎಸ್.ಐ.ಎ) ವರದಿ ಹಾಗೂ ಸಾಮಾಜಿಕ ಪರಿಣಾಮ ವ್ಯವಸ್ಥಾಪನಾ ಯೋಜನೆ (ಎಸ್.ಐ.ಎಂ.ಪಿ) ಯನ್ನು **ರಾಜ್ಯ ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು** ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಯಾವುದಾದರೂ ಅನಿವಾರ್ಯ ಅಥವಾ ಇತರೆ ಕಾರಣಗಳಿಂದ ಗ್ರಾಮ ಸಭೆಯ ದಿನಾಂಕಗಳನ್ನು ಬದಲಾಯಿಸಲು ಮತ್ತು ಬೇರೆ ದಿನಾಂಕಗಳನ್ನು ನಿಗಧಿಪಡಿಸಲು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯು ಅಧಿಕಾರ ಹೊಂದಿರುತ್ತಾರೆ.

ಜಿಲ್ಲಾಧಿಕಾರಿ
ಚಿತ್ರದುರ್ಗ ಜಿಲ್ಲೆ
ಚಿತ್ರದುರ್ಗ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಭೂಸ್ವಾಧೀನ-2), 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಆಯುಕ್ತರು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಜಿಲ್ಲೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು ಚಿತ್ರದುರ್ಗ ಉಪವಿಭಾಗ ಚಿತ್ರದುರ್ಗ ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಚಿತ್ರದುರ್ಗ ವಿಭಾಗ, ಚಿತ್ರದುರ್ಗ ಇವರಿಗೆ ಮಾಹಿತಿಗಾಗಿ ಹಾಗೂ ಅನುಮೋದಿತ ಸಂಸ್ಥೆಯವರೊಂದಿಗೆ ಗ್ರಾಮಸಭೆಗೆ ಹಾಜರಾಗಿ ಸಹಕರಿಸಲು ಸೂಚಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಹಿರಿಯೂರು ಉಪವಿಭಾಗ, ಇವರಿಗೆ ಮಾಹಿತಿಗಾಗಿ ಹಾಗೂ ಅನುಮೋದಿತ ಸಂಸ್ಥೆಯವರೊಂದಿಗೆ ಗ್ರಾಮಸಭೆಗೆ ಹಾಜರಾಗಿ ಸಹಕರಿಸಲು ಸೂಚಿಸಿದೆ.
7. ತಹಶೀಲ್ದಾರ್, ಹಿರಿಯೂರು ತಾಲ್ಲೂಕು ರವರಿಗೆ ಮಾಹಿತಿಗಾಗಿ ಮತ್ತು ಸದರಿ ಅಧಿಸೂಚನೆಯನ್ನು ತಾಲ್ಲೂಕು ಕಛೇರಿಯಲ್ಲಿ, ಸಂಬಂಧಪಟ್ಟ ಗ್ರಾಮ ಪಂಚಾಯತ್ ಹಾಗೂ ಗ್ರಾಮ ಚಾವಡಿಗಳಲ್ಲಿ ನಿಯಮಾನುಸಾರ ಪ್ರಚುರಪಡಿಸಿ, ಮಹಜರ್‌ನೊಂದಿಗೆ ವರದಿ ಮಾಡಲು ತಿಳಿಸಿದೆ.
8. ಜಿಲ್ಲಾ ಮಾಹಿತಿ ಅಧಿಕಾರಿ, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್.ಐ.ಸಿ) ಜಿಲ್ಲಾಧಿಕಾರಿಗಳ ಕಛೇರಿ ಚಿತ್ರದುರ್ಗ ಜಿಲ್ಲೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.
9. ಅಧ್ಯಕ್ಷರು, ಲೀಡ್(ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ.
10. ಕಛೇರಿ ಪ್ರತಿ.